

ಸಾಧ್ಯವಿರಲಿಲ್ಲ; ವೃದ್ಧಾಶ್ರಮದವರು ಮೆಸೇಜ್ ಬಿಟ್ಟಿರಬಹುದು ಅಥವಾ ಅದೂ ತುಂಬಿ ಕೊಂಡಿರಬಹುದು. ಮೆಸೇಜ್ ಸಿಕ್ಕರೂ.. ಅವನ ಅಸಹಾಯಕತೆ. ಅವನನ್ನು ನೋಡುತ್ತಿದ್ದರೆ ಬೆಂಕಿಯ ನೋಟದಿಂದಲೇ ನಡುಗಿ ಹೋಗುವ ಭಯವನ್ನೂ ಮೀರಿಸುವ ಅಸಹಾಯಕತೆ ಬೇಡವೆಂದರೂ ನನ್ನನ್ನು ಆವರಿಸಿಕೊಂಡುಬಿಡುತ್ತದೆ. ನಾನಲ್ಲಿಂದ ತಪ್ಪಿಸಿಕೊಂಡು ಟ್ರಾಂಕ್ವಿಲ್ ಮೀಡೋಸ್‌ಗೆ ಹೋದರೆ, ಈಗ ಅಲ್ಲಿಂದ ಈ ಬೆಂಕಿಗೆ ಹೆದರಿ... ಬೆಂಕಿ, ಬಾಣಲೆಗಳ ನಡುವಿನ ಜಿಗಿತ...

'ಓಹ್' ಎಂದ.

ಪೂರ್ತಿಯಾಗಿ ನಂಬದ, ಅಲ್ಲಿ ಮನೆಯಿದ್ದರೆ ನೀವ್ಯಾಕೆ ಈ ಕಾಡಿನಲ್ಲಿದ್ದೀರಿ ಎನ್ನುವ ಚಿರಪರಿಚಿತ ಉದ್ಗಾರ. ಚುಚ್ಚಿದಂತಾಯ್ತು. ನಾನು ಹೀಗೆ ಉತ್ತರಿಸಿದಾಗ ವೃದ್ಧಾಶ್ರಮದ ಹಲವು ಅರೆ ಪರಿಚಿತರೂ ಇದೇ ಉದ್ಗಾರ ತೆಗೆದು, ನಂಬಲಾಗದು ಎನ್ನುವಂತೆ ತಲೆಯಾಡಿಸಿ, ಚೌಕಾಸಿ ಮಾಡುವವರಂತೆ 'ಇರಬಹುದೇನೋ' ಎಂದು ಔದಾರ್ಯದ ತೇಪೆ ಹಾಕುತ್ತಿದ್ದರು.

'ನೀನು ಎಷ್ಟು ವರ್ಷದಿಂದ ಕಾರು ಓಡಿಸುತ್ತಿದ್ದಿಯಾ?' ಎಂದು ಕೇಳಿದೆ.

'ಇನ್ನೆರಡು ತಿಂಗಳಾದರೆ ಎರಡು ವರ್ಷಗಳಾಗುತ್ತವೆ' ಎಂದ. ಮತ್ತೆ, ಹೇಳಬೇಕೋ ಬೇಡವೋ ಎಂದು ಹಿಂಜರಿಯುತ್ತಲೇ, 'ಎರಡು ವರ್ಷಗಳ ಹಿಂದೆ, ಇದೇ ತಿಂಗಳಲ್ಲಿ ಆದ ಕ್ಯಾಂಪ್ ಫೈರ್ ಕಾಡ್ಗಿಚ್ಚು ನೆನಪಿದೆಯೇ? ನಿಮ್ಮ ವೃದ್ಧಾಶ್ರಮದಿಂದ ನಲವತ್ತೈದು ಮೈಲಿ ದೂರ, ಅಷ್ಟೆ. ಆವಾಗ ನಮ್ಮ ಮನೆ ಬೆಂಕಿಯಲ್ಲಿ ಸುಟ್ಟುಹೋಯಿತು. ಹೈಸ್ಕೂಲೂ ಸಹ.'